# ಪುಸ್ತಕ ಪರಿಚಯ

## ಜಪ ಮತ್ತು ಧ್ಯಾನ

*ಸಂಕಲನ* : ಸ್ವಾಮಿ ರಾಘವೇಶಾನಂದ
*ಪ್ರಕಾಶಕರು*: ವಿವೇಕಾನಂದ ಆಶ್ರಮ,
ಅಲಸೂರು, ಬೆಂಗಳೂರು.
ಪುಟಗಳ ಸಂಖ್ಯೆ : ೪೮ ಬೆಲೆ : ರೂ. ೨

"ಭಗವಂತ ನಮಗೆ ಬೆರಳುಗಳನ್ನು ಕೊಟ್ಟಿರುವುದೇಕೆಂದರೆ ಅವುಗಳ ಮೂಲಕ ಜಪಮಾಡಿ ಅವೂ ಧನ್ಯವಾಗಲಿ ಎಂದು" ಎನ್ನುತ್ತಾರೆ ಶಾರದಾದೇವಿಯವರು. ಭಗವಂತ ನಮಗೆ ಬೆರಳುಗಳನ್ನು ಕೊಟ್ಟಿರುವುದು ಜೀವನವನ್ನು ಸುಖಮಯವಾಗಿಸಲು, ದುಡಿದು ಹಣ ಸಂಪಾದಿಸಲು ಎಂದು ಆಲೋಚಿಸುವ ಮನುಷ್ಯನಿಗೆ ಇಲ್ಲಿದೆ ಒಂದು ಹೊಸ ಆಯಾಮ. ಇಂದಿನ ಧಾವಂತ ಸಮಾಜದಲ್ಲಿ ಮೌಲ್ಯಗಳ ಪಾಲನೆಗೆ, ಉನ್ನತ ಚಿಂತನೆ-ಭಾವನೆಗಳಿಗೆ ಯಾರಿಗೂ ತಾಳ್ಮೆಯಿಲ್ಲ, ಸಮಯವಿಲ್ಲ. ಸತ್ಯವನ್ನು ಹೇಳುವುದಾದರೆ ಇವುಗಳಲ್ಲಿ ಆಸಕ್ತಿಯಿಲ್ಲ. ಎಲ್ಲವನ್ನೂ ಲಾಭದ, ವ್ಯಾಪಾರ ದೃಷ್ಟಿಯಿಂದ ಅಳೆಯುವ ಇಂದಿನ ವ್ಯಕ್ತಿ ನೀಡುವ ಸಮಜಾಯಿಷಿ, "ಕೆಲಸಗಳ ಮಧ್ಯೆ ಸಮಯವೇ ಇಲ್ಲ. ಎಷ್ಟೊಂದು ಕೆಲಸ!" ಅಂತ. ಶ್ರೀಮಾತೆ ಶಾರದಾದೇವಿ ಹೇಳುತ್ತಾರೆ : "ನಾನು ನಿಮ್ಮ ವಯಸ್ಸಿನಲ್ಲಿ ಎಷ್ಟು ಕೆಲಸ ಮಾಡುತ್ತಿದ್ದೆ! ಆದರೂ ಪ್ರತಿದಿನ ಲಕ್ಷ ಜಪ ಮಾಡಲು ನನಗೆ ಸಮಯ ಸಿಗುತ್ತಿತ್ತು"; "ಒಬ್ಬನು ಎಷ್ಟೇ ಬಿಡುವಿಲ್ಲದ ಕೆಲಸದಲ್ಲಿ ತೊಡಗಿದ್ದರೂ ಒಂದು ಗೊತ್ತಾದ ಸಮಯವನ್ನು ಇದಕ್ಕಾಗಿ ನಿತ್ಯವೂ ತೆಗೆದಿಡಬೇಕು... ಕೊನೆಯಪಕ್ಷ ಕಾರ್ಯಗಳ ಮಧ್ಯದಲ್ಲಿ ದೇವರ ಸ್ಮರಣೆಯನ್ನಾದರೂ ಮಾಡಿ ನಮಸ್ಕರಿಸಬೇಕು."

ಶ್ರೀಮಾತೆ ಎಷ್ಟು ಸುಲಭವಾಗಿ ಸಾಧನೆಯ ಸೂಕ್ಷ್ಮತೆಗಳನ್ನು ಸರಳ ಭಾಷೆಯಲ್ಲಿ ತಿಳಿಸುತ್ತಿದ್ದರು! ಅವರ ಮಾತಿನಲ್ಲಿ ಪಾಂಡಿತ್ಯದ ಪ್ರದರ್ಶನವಿಲ್ಲ, ಬಲ್ಲವರ ಧೋರಣೆಯಿಲ್ಲ. ಪ್ರೀತಿಯ ಕಳಕಳಿ, ತಾಯಿಯ ವಾತ್ಸಲ್ಯದ ಚಿಲುಮೆಯಿದೆ. ಅವರು ಜನಿಸಿ ೧೫೦ ವರ್ಷಗಳೇ ಸಂದಿವೆಯಾದರೂ ಜನಸಾಮಾನ್ಯರಿಗೆ ಅವರ ಜೀವನದ ಹಿರಿಮೆ ತಿಳಿದಿಲ್ಲ. ರಾಮಕೃಷ್ಣ ಸಂಘವು ಈ ವರ್ಷವನ್ನು ವಿಶೇಷವಾಗಿ ಪರಿಗಣಿಸಿ ಶ್ರೀಮಾತೆಯ ಜೀವನ ಸಂದೇಶಗಳ ಪ್ರಚಾರಕ್ಕಾಗಿ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಬೆಂಗಳೂರಿನ ವಿವೇಕಾನಂದ ಆಶ್ರಮದ ಅಧ್ಯಕ್ಷರಾದ ಸ್ವಾಮಿ ರಾಘವೇಶಾನಂದಜಿಯವರು ಶ್ರೀಮಾತೆಯ ನುಡಿಗಳಿಂದ ಜಪ ಮತ್ತು ಧ್ಯಾನಕ್ಕೆ ಸಂಬಂಧಿಸಿರುವ ಉಕ್ತಿಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಿರುವರು. ಪ್ರತಿ ಪುಟದಲ್ಲಿಯೂ ಶ್ರೀಮಾತೆಯವರ ವಿವಿಧ ಭಾವಚಿತ್ರಗಳನ್ನು ಬಹಳ ಮುದ್ದಾಗಿ ಮುದ್ರಿಸಲಾಗಿದೆ. ಒಟ್ಟು ೨೨ ಭಾವ ಚಿತ್ರಗಳನ್ನು ಹಾಗೂ ೨೮ ಉಕ್ತಿಗಳನ್ನು ಹೊಂದಿರುವ ಈ ಕಿರುಹೊತ್ತಿಗೆಯ ಬೆಲೆ ಕೇವಲ ಎರಡು ರೂಪಾಯಿ. ಕೆಲಸದ ಮಧ್ಯೆ ಸಮಯ ದೊರೆತಾಗ ಪುಸ್ತಕವನ್ನು ತೆರೆದು ಓದಿದಾಗ ನಮ್ಮ ಧ್ಯೇಯವು ನೆನಪಿಗೆ ಬಂದು ಸಾಧನೆಗೆ ಪುಷ್ಟಿ ದೊರೆಯುವುದು. ಎಲ್ಲರಿಗೂ ಅನ್ವಯವಾಗುವಂತೆ ಶ್ರೀಮಾತೆಯವರ ಜೀವನದ ಕಿರು ಪರಿಚಯವನ್ನೂ ಸೇರಿಸಿದ್ದರೆ ಇದು ಮತ್ತಷ್ಟು ಮೆರಗು ಪಡೆಯುತ್ತಿತ್ತು. ಶ್ರೀಮಾತೆಯವರ ಈ ನುಡಿಗಳು ಭಕ್ತರ ನಿತ್ಯಸಾಧನೆಯಲ್ಲಿ ಪ್ರೇರಣೆಯನ್ನು ನೀಡುವುದರಲ್ಲಿ ಸಂದೇಹವಿಲ್ಲ. ವಯೋವೃದ್ಧರಿಗೂ ಓದಲು ಸುಲಭವಾಗುವಂತೆ ದಪ್ಪಕ್ಷರಗಳ ಮುದ್ರಣ ಆಕರ್ಷಕವಾಗಿದೆ. ಈಗಾಗಲೇ ಹತ್ತಾರು ಸಾವಿರ ಪ್ರತಿಗಳು ಜನರ ಕೈಸೇರಿವೆ ಎಂಬ ವರದಿಯೂ ಬಂದಿರುವುದು ಸಂತಸದ ಸಂಗತಿ.

—*ಸ್ವಾಮಿ ಆತ್ಮಜ್ಞಾನಂದ*

### ಶ್ರೀಮಾತೆ ಶಾರದಾದೇವಿಯವರನ್ನು ಕುರಿತ ಕೆಲವು ಪ್ರಕಟನೆಗಳು

೧. ಶ್ರೀಶಾರದಾದೇವಿ ಜೀವನಗಂಗಾ
◆ *ಸ್ವಾಮಿ ಪುರುಷೋತ್ತಮಾನಂದ*
ವಿವಿಧ ಘಟನೆಗಳು ವ್ಯಾಖ್ಯಾನಗಳಿಂದ ಕೂಡಿದ ಶ್ರೀಮಾತೆಯವರ ಸಮಗ್ರ ವ್ಯಕ್ತಿತ್ವದ ಚಿತ್ರವನ್ನು ನೀಡುವ, ಸವಿಸ್ತಾರ ಜೀವನ ಚರಿತ್ರೆಯ ಬೃಹತ್ ಗ್ರಂಥ. ಬೆಲೆ : ರೂ.125/-

೨. ಶ್ರೀಶಾರದಾದೇವಿಸಂದೇಶಮಂದಾರ
◆ *ಸ್ವಾಮಿ ಪುರುಷೋತ್ತಮಾನಂದ*
ಶ್ರೀಮಾತೆಯವರ ಉಪದೇಶಗಳಿಂದ ಕೆಲವು ವಾಕ್‌ಪುಷ್ಪಗಳನ್ನು ಆಯ್ದು, ಅವನ್ನು ವ್ಯಾಖ್ಯಾನಸೂತ್ರದಲ್ಲಿ ಪೋಣಿಸಿರುವ ಸುಂದರ ಪುಷ್ಪಮಾಲೆ. *ಬೆಲೆ : ರೂ.20/-*

೩. ವಾತ್ಸಲ್ಯತೀರ್ಥ
*Teachings of Sri Sharada Devi* ಎಂಬ ಆಂಗ್ಲಕೃತಿಯ ಕನ್ನಡಾನುವಾದ. ಕಿರುಕೃತಿಯಾದರೂ ಅತ್ಯಂತ ಉಪಯುಕ್ತ, ಹೃದಯಸ್ಪರ್ಶಿ ಚಿಂತನೆಗಳಿಂದ ಕೂಡಿದೆ. ಅನುವಾದಕರು *ಶ್ರೀ ಹೆಚ್. ಎನ್. ಮುರಳೀಧರ* *ಬೆಲೆ : ರೂ.30/-*

೪. ಶ್ರೀಮಾತೆ ಶಾರದಾದೇವಿ ◆ *ಸ್ವಾಮಿ ನಿತ್ಯಸ್ಥಾನಂದ*
ಶ್ರೀಮಾತೆಯವರ ವ್ಯಕ್ತಿತ್ವದ ವಿವಿಧ ಮುಖಗಳನ್ನು ಪ್ರತಿಬಿಂಬಿಸುವ ಹಲವಾರು ಘಟನೆಗಳಿಂದ ಕೂಡಿರುವ, ಸರಳತೆಯ ತೆರೆಮರೆಯ ಮಹೋನ್ನತ ವ್ಯಕ್ತಿತ್ವದ ಒಂದು ವಾಸ್ತವ ಚಿತ್ರವನ್ನು ನೀಡುವ ಗ್ರಂಥ. *ಬೆಲೆ : ರೂ.40/-*

೫. ಶ್ರೀಶಾರದಾದೇವಿ ◆ *ಸ್ವಾಮಿ ಸೋಮನಾಥಾನಂದ*
ಸರಳ ಶೈಲಿಯಲ್ಲಿ ಬರೆದಿರುವ ಶಾರದಾದೇವಿಯವರ ಸರಳ ಜೀವನದ ಮನೋಜ್ಞ ಚಿತ್ರ. *ಬೆಲೆ : ರೂ.20/-*

೬. ಶ್ರೀಶಾರದಾದೇವಿ ಸಂಭಾಷಣೆ
ಶ್ರೀಮಾತೆಯವರ ಮಾತೃಪ್ರೇಮದ ಮಕರಂದದಿಂದ ಕೂಡಿದ ಅವರ ವಾಕ್ಪುಷ್ಪಗಳ ಸಂಗ್ರಹ. *ಬೆಲೆ : ರೂ.35/-*

೭. ಮಕ್ಕಳ ಶಾರದಾದೇವಿ
ಮಕ್ಕಳ ಮನಸ್ಸನ್ನು ಸೆಳೆಯುವ ವಾತ್ಸಲ್ಯಮಯ ಜೀವನದ ವರ್ಣಮಯ ಚಿತ್ರ. *ಬೆಲೆ : ರೂ.16/-*